## ಮಂದಗತಿಯಲ್ಲಿ ಮಹಾದೇವ

ಸ್ಟಾರ್ ಸುವರ್ಣ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ಹರ ಹರ ಮಹಾದೇವ' ಧಾರಾವಾಹಿಯು ಬಹಳ ಅದ್ಭುತವಾಗಿ ಮೂಡಿಬರುತ್ತಿದೆ. ಆದರೆ ತುಂಬಾ ಮಂದಗತಿಯಲ್ಲಿ ಕಂತುಗಳು ಬರುತ್ತಿರುವುದರಿಂದ ಜನರು ತಾಳ್ಮೆ ಕಳೆದುಕೊಂಡು ನೋಡುವುದನ್ನು ನಿಲ್ಲಿಸಬಹುದು. ಆದ್ದರಿಂದ ಸ್ವಲ್ಪ ವೇಗವನ್ನು ಕೊಟ್ಟರೆ ಒಳ್ಳೆಯದು.

—ಕವನ ಜಿ., ಸಕಲೇಶಪುರ

## ಹಳಿ ತಪ್ಪಿದ ಬಂಡಿ

ಆ.29ರಂದು 'ಜನಶ್ರೀ' ವಾಹಿನಿಯಲ್ಲಿ 'ಭಲೆ ಪೂಜಿತಾ' ಎಂಬ ಶೀರ್ಷಿಕೆಯಲ್ಲಿ ನಾಪತ್ತೆಯಾಗಿದ್ದ ಹುಡುಗಿ ಪತ್ತೆಯಾದಾಗ ಹುಡುಗಿಯ ತಂದೆ– ತಾಯಿ ಮತ್ತು ಸಂಬಂಧಿಕರೊಂದಿಗೆ ಸಂದರ್ಶನ ಮಾಡಿದರು. ವಾಹಿನಿಯವರ ಸಂದರ್ಶನದಲ್ಲಿ ಆ ಹುಡುಗಿ ಪೂಜಿತಾ ಮಾತನಾಡಿದ ರೀತಿ ಪ್ರಬುದ್ಧವಾಗಿತ್ತು. ಆಕೆ ಅಷ್ಟೆಲ್ಲಾ ಜಾಣ್ಮೆಯಿಂದ ಮಾತುಗಳನ್ನು ಆಡುವಾಗ ತಂದೆ– ತಾಯಿಗೆ ತನ್ನ ಒಂದು ಕೆಲಸ (ಅಂಕ ಕಡಿಮೆ ಬಂದಿತೆಂದು ಮನೆ ಬಿಟ್ಟು ಹೇಳದೆ ಕೇಳದೆ ಹೋಗಿದ್ದು)ದಿಂದ ಆಗುವ ಸಂಕಟದ ಪರಿಕಲ್ಪನೆ ಇಲ್ಲದಿರುವುದು ತುಂಬಾ ಬೇಸರ ಮೂಡಿಸಿತು. ಪ್ರಯತ್ನಪಟ್ಟರೆ ಅಂಕ ಹೆಚ್ಚು ಪಡೆಯಬಹುದು. ಆದರೆ ಜೀವನದಲ್ಲಿ ಒಮ್ಮೆ ಹಳಿ ತಪ್ಪಿದರೆ ಸರಿದಾರಿಯಲ್ಲಿ ಬಂಡಿ ನಡೆಸುವುದು ಕಷ್ಟ.

—ಹೊ. ನಾ. ಲಲಿತ, ಬೆಂಗಳೂರು

## ಹಠಾತ್ ಅಂತ್ಯ

ಸುವರ್ಣ ಚಾನೆಲ್‌ನಲ್ಲಿ ಪ್ರಸಾರವಾಗುತ್ತಿದ್ದ ಗುಂಡ್ಯಾನ ಹೆಂಡ್ತಿ ಧಾರಾವಾಹಿ ತುಂಬಾ ಚೆನ್ನಾಗಿ ಮೂಡಿ ಬರುತ್ತಿತ್ತು. ಹಠಾತ್ತಾಗಿ ಮುಗಿಸಿದ್ದು ಬೇಸರ ತರಿಸಿದೆ. ನಮ್ಮ ಆಡುಭಾಷೆಯಲ್ಲಿ (ಉತ್ತರ ಕರ್ನಾಟಕದ) ಬರುವ ಧಾರಾವಾಹಿಗಳು ಬಹುಶಃ ಎಲ್ಲರಿಗೂ ಇಷ್ಟವಾಗುತ್ತವೆ. ಅಂಥವೇ ಮತ್ತೆ ಮೂಡಿ ಬರಲಿ.

—ನೀಲಮ್ಮ ಕುಮಾರಪ್ಪ, ಲಿಂಗಸಗೂರ

## 'ಕಿನ್ನರಿ' ಎಂಬೋ ಕಿರಿಕ್

ಮೊದಮೊದಲು ಮಗುವಿನ ಮುಖ ನೋಡಿ ರುಚಿಸಿದ ಕಿನ್ನರಿ ಧಾರಾವಾಹಿ ಬರಬರುತ್ತ 'ಯಪ್ಪಾ' ಎನ್ನಿಸಿ ಬೋರ್ ಹೊಡೆಸತೊಡಗಿದೆ. ಅಸಂಬದ್ಧ ಕಥೆ, ಅಸಮಂಜಸ ಸಂಭಾಷಣೆ, ಯಾವಾಗಲೂ ಮುಖ ಗಂಟಿಕ್ಕಿಕೊಂಡು ಮಾತಾಡೋ ಆ ಐಷೂ ... ಅವಳಿಗೆ ಸಮಜಾಯಿಷಿ ಹೇಳೋ ಅವರಮ್ಮ.. ಮಣಿಯ ಓವರ್ ಆ್ಯಕ್ಟಿಂಗ್, ಮದನನ ಮುಜುಗರವೆನಿಸುವ ನಗು ಮುಖ, ಚಂದ್ರಾಳ ಕೆಟ್ಟ ಡೈಲಾಗ್‌ಗಳು, ಅಳಿಯನ ಮನೆಯಲ್ಲಿ ಆಡಳಿತ ನಡೆಸೋ ಅತ್ತೆ... ಅರ್ಥವೇ ಇಲ್ಲದ 'ಎತ್ತೆತ್ತಲಾಗೋ' ಹರಿದು ಹೋಗುವ ಕಥೆ ಹೊಂದಿರುವ ಸೂತ್ರ ಕಿತ್ತ ಗಾಳಿ ಪಟ ಈ ಕಿನ್ನರಿ.

ದಯವಿಟ್ಟು ಇದನ್ನು ನಿಲ್ಲಿಸಿ.

—ಎನ್. ಹೇಮಪ್ರಕಾಶ್, ಮೈಸೂರು

**ವಾರದ ಪತ್ರ**

## ಭಾಷೆಯ ಅವಾಂತರ

ಸ್ಟಾರ್ ಸುವರ್ಣ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ಹರ ಹರ ಮಹಾದೇವ' ಎಲ್ಲ ರೀತಿಯಲ್ಲೂ ಅದ್ಭುತವಾಗಿ ಮೂಡಿಬರುತ್ತಿದೆ. ಅದ್ದೂರಿ ಸೆಟ್, ವಸ್ತ್ರಾಭರಣ ಎಲ್ಲವೂ ಶ್ರೀಮಂತವಾಗಿದೆ. ಕನ್ನಡ ವಾಹಿನಿಗಳಲ್ಲಿ ಇದುವರೆಗೆ ಬಹುಶಃ ಇಷ್ಟು ಅದ್ದೂರಿಯಾಗಿ ಮೂಡಿಬರುತ್ತಿರುವ ಮೊದಲ ಧಾರಾವಾಹಿ ಇದೇ ಇರಬಹುದು.

ಆದರೆ ನಾನು ಗಮನಿಸಿದ ಒಂದು ಅಂಶವನ್ನು ನಿರ್ದೇಶಕರ ಗಮನಕ್ಕೆ ತರಲು ಬಯಸುತ್ತೇನೆ. ಪೌರಾಣಿಕ ಧಾರಾವಾಹಿಗಳಲ್ಲಿ ಭಾಷೆಯ/ಸಂಭಾಷಣೆಯ ಬಳಕೆಯಲ್ಲಿ ಕೆಲವು ಅಂಶಗಳನ್ನು ಗಮನಿಸಬೇಕಾಗುತ್ತದೆ. ಸಂಭಾಷಣೆಯಲ್ಲಿ ತೂಕ ಕಡಿಮೆ ಎನಿಸುತ್ತಿದೆ. ಇದು ನನ್ನಂತಹ ಹಲವಾರು ಭಾಷಾ ಪ್ರಿಯರ ಅನುಭವವೂ ಆಗಿರಬಹುದು. (ಉದಾ: ಗೊತ್ತು – ತಿಳಿದಿದೆ, ಅರಿವಿದೆ, ಖಂಡಿತ – ನಿಶ್ಚಯ, ಅಪ್ಪ – ತಂದೆ, ಪಿತ, ಮದುವೆ – ವಿವಾಹ, ಪರಿಣಯ, ಗಂಡ – ಪತಿ ಹೀಗೆ...) ಬಹುಶಃ ಹಿಂದಿಯಲ್ಲಿ ಇದೇ ಹೆಸರಿನ ಚಾನೆಲ್‌ನಲ್ಲಿ ಪ್ರಸಾರವಾಗಿದ್ದ ಈ ಧಾರಾವಾಹಿಯನ್ನು ಅಕ್ಷರಶಃ ಕನ್ನಡೀಕರಣಗೊಳಿಸಿದ್ದು ಇದಕ್ಕೆ ಕಾರಣವಿರಬಹುದು. ಸಂಭಾಷಣೆಗಳನ್ನು ಕೂಡಾ ಭಾಷಾಂತರ ಮಾಡಲಾಗಿದೆ ಎನಿಸುತ್ತದೆ. ಈ ವಿಷಯದಲ್ಲಿ ತಿದ್ದಿಕೊಂಡರೆ 'ಹರ ಹರ ಮಹಾದೇವ' ಸಂಪೂರ್ಣ ಗುಣಮಟ್ಟದ ಧಾರಾವಾಹಿಯಾಗುವುದರಲ್ಲಿ ಸಂಶಯವಿಲ್ಲ. ಕನ್ನಡ ದೃಶ್ಯ ಮಾಧ್ಯಮವು ಕನ್ನಡದ ಭಾಷಾ ಶ್ರೀಮಂತಿಕೆಯಲ್ಲಿ ಎಳ್ಳೂ ರಾಜಿ ಮಾಡಿಕೊಳ್ಳಬಾರದು.

ಇಂತಹ ಸದಭಿರುಚಿಯ ಧಾರಾವಾಹಿಯನ್ನು ಸ್ಟಾರ್ ಸುವರ್ಣ ಪ್ರೇಕ್ಷಕರಿಗೆ ಉಣಬಡಿಸುತ್ತಿರುವುದು ಅಭಿನಂದನಾರ್ಹ.

—ಸತ್ಯವತಿ, ಬೆಂಗಳೂರು

## ಎತ್ತಣದಿಂದ ಎತ್ತ ಕಡೆ?

ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ಲಕ್ಷ್ಮಿ ಬಾರಮ್ಮ ಮೂಲ ಕಥೆಯನ್ನೇ ಮರೆತು ಆನೆ ನಡೆದಿದ್ದೇ ಹಾದಿ ಎಂಬಂತೆ ಪ್ರಸಾರವಾಗುತ್ತಿದೆ. ಇನ್ನೇನು ಧಾರಾವಾಹಿ ಮುಗಿಯಿತು ಅಂದುಕೊಂಡಾಗಲೆ ಇನ್ನಾವುದೊ ಕಥೆ ತೆರೆದುಕೊಂಡು ವೀಕ್ಷಕರ ಮೆದುಳಿಗೆ ಕೈ ಹಾಕಿದ್ದಾರೆ ಎಂದರೆ ತಪ್ಪಾಗಲಾರದು. ಈಗ ಕೆಲವು ತಿಂಗಳುಗಳಿಂದ ಹಿರಿತೆರೆಯಲ್ಲಿ ಹಾರರ್ ಕಥೆಗಳು ಒಂದರ ಹಿಂದೆ ಒಂದರಂತೆ ಬಂದು ಹೋಗುತ್ತಿವೆ. ಅದನ್ನೆ ಗಣನೆಗೆ ತೆಗೆದುಕೊಂಡು ಇಲ್ಲಿಯೂ ದೆವ್ವದ ಅಂಶ ಸೇರಿಸಿ ಪ್ರೇಕ್ಷಕರ ಸಹನೆ ಕೆದಕುತ್ತಿದ್ದಾರೆ. ಇದನ್ನು ನೋಡಿ ಕೋಟ್ಯಾಂತರ ಕನ್ನಡಿಗರು ಒಳಗೊಳಗೆ ಹಿಂಸೆ ಅನುಭವಿಸುತ್ತಾರೆ ಎಂದರೆ ತಪ್ಪಾಗಲಾರದು. ದಯವಿಟ್ಟು ಲಕ್ಷ್ಮಿ ಬಾರಮ್ಮ ತಂಡದವರು ಆದಷ್ಟು ಬೇಗ ಧಾರಾವಾಹಿಯನ್ನು ಕೊನೆಗಾಣಿಸಿ, ಬೇರೆಯವರಿಗೆ ಅವಕಾಶ ಮಾಡಿಕೊಡಲಿ ಎಂಬುದು ನನ್ನ ಕಳಕಳಿಯ ಮನವಿ.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ಎಂತಹ ಅಕ್ಕ!

'ಕಲರ್ಸ್ ಕನ್ನಡ' ವಾಹಿನಿಯಲ್ಲಿ ಪ್ರಸಾರವಾಗುವ ಬಹುತೇಕ ಧಾರಾವಾಹಿಗಳು ತಮ್ಮ ನೈಜತೆಯನ್ನು ಕಳೆದುಕೊಂಡಿವೆ. ಅದರಲ್ಲೂ 'ಪುಟ್ಟ ಗೌರಿ ಮದುವೆ' ಮತ್ತು 'ಅಕ್ಕ' ಧಾರಾವಾಹಿಯ ಮೂಲಕ ನಿರ್ದೇಶಕರು ನಮ್ಮ ಸಮಾಜಕ್ಕೆ ಯಾವ ಒಳ್ಳೆ ಸಂದೇಶ ನೀಡಲು ಹೊರಟಿದ್ದಾರೆ ಎಂದು ತಿಳಿಯುತ್ತಿಲ್ಲ. ಈ ಧಾರಾವಾಹಿಯ ಕೆಲವು ಸನ್ನಿವೇಶಗಳು ಹಾಸ್ಯಾಸ್ಪದವಾಗಿವೆ. ಇದು ಕೇವಲ 'ಪುಟ್ಟಗೌರಿ' ಅಥವ 'ಅಕ್ಕ' ಧಾರಾವಾಹಿಗೆ ಸೀಮಿತವಾಗಿಲ್ಲ, ಟಿವಿಯಲ್ಲಿ ಪ್ರಸಾರವಾಗುವ ಬಹುತೇಕ ಧಾರಾವಾಹಿಗಳದ್ದು ಇದೇ ಗೋಳು.. ಇನ್ನಾದರೂ ಒಳ್ಳೆಯ ಧಾರಾವಾಹಿಗಳು ಟಿವಿ ಪರದೆಯ ಮೇಲೆ ನೋಡಲು ಸಿಗಬಹುದೇ ಎಂದು ಕಾದು ನೋಡಬೇಕು.

ಯಶ್, ಮಂಗಳೂರು

## ರಿಯಲ್ ಆಗಿರಲಿ ರಿಯಾಲಿಟಿ

ಇತ್ತೀಚೆಗೆ ಎಲ್ಲಾ ಟಿವಿ ಚಾನೆಲ್‌ಗಳಲ್ಲಿ ರಿಯಾಲಿಟಿ ಶೋ ಎಂಬ ಕಾರ್ಯಕ್ರಮಗಳನ್ನು ಪ್ರಸಾರಮಾಡಿ ಆ ರಿಯಾಲಿಟಿ ಶೋನಲ್ಲಿ ಬರೀ ಸೆಲೆಬ್ರಿಟಿಗಳೇ ಭಾಗವಹಿಸಿ ಕುಣಿಯುತ್ತಾ ಮೋಜು ಮಾಡುತ್ತಾ ಬಂದು ಬಹುಮಾನಗಳೆನ್ನೆಲ್ಲಾ ಅವರೇ ಬಾಚಿಕೊಂಡ್ರೆ ವೀಕ್ಷಕರಾದ ನಮಗೆ ಏನು ಲಾಭ? ಟಿವಿ ವೀಕ್ಷಕರಾದ ನಮ್ಮಲ್ಲೂ ಪ್ರತಿಭಾನ್ವಿತರಿದ್ದು, ಅವರಿಗಿಂತ ಒಂದು ಕೈ ಮೇಲಿದ್ದು, ನಮಗೂ ಆ ರಿಯಾಲಿಟಿ ಶೋನಲ್ಲಿ ಭಾಗವಹಿಸಲು ಅವಕಾಶ ನೀಡ್ತಿಲ್ಲಾ? ಬರೀ ಟಿವಿ ಧಾರಾವಾಹಿ ನಟ– ನಟಿಯರಿಗೆ ಮಾತ್ರ ರಿಯಾಲಿಟಿ ಶೋನಲ್ಲಿ ಭಾಗವಹಿಸಲು ಅವಕಾಶ ನೀಡಿ ನಮಗೆ ಮೋಸ ಮಾಡಿದಂತಾಗುತ್ತದೆ. ಎಲ್ಲಾ ಟಿವಿ ಚಾನೆಲ್‌ಗಳಿಗೆ ಒಂದು ಕಿವಿಮಾತು, 'ಬರೀ ಸೆಲೆಬ್ರಿಟಿಗಳು' ಮನುಷ್ಯರು, ಪ್ರತಿಭಾವಂತರು ನಾವೆಲ್ಲಾ ಬರೀ ವೀಕ್ಷಕ ಕುರಿಗಳೆಂದು ಭಾವಿಸಬೇಡಿ. ನಮಗೂ ರಿಯಾಲಿಟಿ ಶೋನಲ್ಲಿ ಭಾಗವಹಿಸಲು ಅವಕಾಶ ನೀಡಿ.

—ರಮೇಶ್, ಭದ್ರಾವತಿ

